GOVERNMENT INDUSTRIES RUNNING UNDER LOSS

230. Sri T. M. MANJUNATH (Tiptur):—

Will the Minister for Industries be pleased to state.—

(a) the new industries started by Government in the state during the current year;

(b) the production target reached in the current year and the last year by these industries ;

(c) the names of Government Industries running under loss ;

(d) the action taken by the Government to minimise the loss ?

Sri K. H PATIL.— (Minister for Agriculture and forest) [On behalf of Sri S. M. KRISHNA (Minister for Industries)]–

(a) Nil.

(b) Does not arise in view of reply to clause (a) above.

(c) 1. Government Electric Factory, Bangalore.
2. Government Central Industrial Workshop, Bangalore.
3. Government Central Workshop, Mercara.
4. Mysore Implements Factory, Hassan.
5. Government Silk Filature, Mysore.
6. do T. Narsipur.
7. do Santhemarahally.
8. do Mambally.
9. do Chamarajanagar.
10. do Kollegal.
11. Government Silk Weaving and Twisting Unit, Mudigundam.

(d) So far as the Industries under the Board of Management for Industrial Concerns are concerned; action has been taken to minimise the losses by taking steps such as reorganisation of top management, introduction of cost control, diversification of production, improve-

ment of designs of transformers, reduction in labour strength, securing orders and effecting economy on all items as far as practicable.

As regards silk filatures the Central Silk Board had appointed a sub-committee to go into the details of the working conditions of filature units and to make recommendations to reduce the losses in these units. The implementation of these recommendations is under progress.

ಶ್ರೀ ಟಿ. ಎಂ. ಮಂಜುನಾಥ.—ಗೌರ್ನಮೆಂಟ್ ಇಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ತಯಾರಾಗುವಂತಹ ಪದಾರ್ಥಗಳು ಯಾವುವು ಮತ್ತು ಅವುಗಳ ಉಪಯೋಗಗಳು ಏನು ಎಂದು ತಿಳಿಸುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ತಯಾರಾಗುವುದು ಟ್ರಾನ್ಸ್‌ಫಾರ್ಮರ್‌ಗಳು, ಸಣ್ಣ ಸಣ್ಣ ವೈರ್‌ಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳಿಗೆ ಬೇಕಾಗುವಂತಹ ವಿವಿಧ ಸಾಮಗ್ರಿಗಳು.

ಶ್ರೀ ಟಿ. ಎಂ. ಮಂಜುನಾಥ —ಸರ್ಕಾರದಿಂದ ನಡೆಸತಕ್ಕಂಥ ಫ್ಯಾಕ್ಟರಿಗಳಲ್ಲಿ ನಷ್ಟವಾಗುವುದಕ್ಕೆ ಕಾರಣ ಏನು ?

ಶ್ರೀ ಕೆ. ಎಚ್. ಪಾಟೀಲ.—ಸರ್ಕಾರ ನಡೆಸತಕ್ಕ ಸಂಸ್ಥೆಗಳಲ್ಲಿ ಖಾಸಗಿ ಸಂಸ್ಥೆಗಳಂತೆ ಅಲ್ಲಿ ದುಡಿಯುವಂಥ ಜನರಿಗೆ ಕಡಿಮೆ ಪಗಾರ ಕೊಟ್ಟು, ಅವರು ನಡೆಸುವ ರೀತಿಯಲ್ಲಿ ನಡೆಸುವುದಕ್ಕಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಸರ್ಕಾರಿ ಫ್ಯಾಕ್ಟರಿಗಳಲ್ಲಿ ತಯಾರಾಗತಕ್ಕಂಥ ಸಾಮಗ್ರಿಗಳು ಸರ್ಕಾರಕ್ಕೆ ಮಾತ್ರ ಉಪಯೋಗವಾಗಿ ಉಳಿದ ಕಡೆ ಮಾರಾಟವಾಗದೆ ಇರುವುದರಿಂದ ಲುಕ್ಸಾನು ಆಗುತ್ತದೆ. ಮಾರ್ಕೆಟ್ ಇನ್‌ಸೆಂಟೀವ್ಸ್ ಬೆಳವಣಿಗೆ ಆಗಬೇಕಾಗಿದೆ, ಇವೆಲ್ಲಾ ಕಾರಣಗಳಿಂದ ನಾವು ನಿರೀಕ್ಷಿಸಿದಷ್ಟು ಲಾಭ ಪಡೆಯುತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ —ಬಿ. ಪ್ರಶ್ನೆಗೆ ಉತ್ತರ ಕೊಡುತ್ತಾ, ಸರ್ಕಾರಿ ಕಾರ್ಖಾನೆಗಳಲ್ಲಿ ಆಗತಕ್ಕ ನಷ್ಟವನ್ನು ಮಿನಿಮೈಸ್ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. " action has been taken to minimise the losses by taking steps such as reorganisation of top management, introduction of cost control, diversification of production, improvement of designs of transformers, reduction in labour strength, securing orders and effecting economy". ಎಂದು ಈ ೭ ವಿಷಯಗಳ ಬಗ್ಗೆ ಒಂದೊಂದು ಫ್ಯಾಕ್ಟರಿಗೆ ಸಂಬಂಧಪಟ್ಟಂತೆ ವಿವರಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಯೇ ? ಇದರಂತೆ ಕಳೆದ ಎರಡು ವರ್ಷಗಳಲ್ಲಿ ಎಷ್ಟು ದೂರ ನಷ್ಟವನ್ನು ಮಿನಿಮೈಸ್ ಮಾಡಿದ್ದೀರಿ ?

ಶ್ರೀ ಕೆ. ಎಚ್. ಪಾಟೀಲ.—ಎಷ್ಟು ನಷ್ಟ ಕಡಿಮೆ ಆಗಿದೆ, ಹೆಚ್ಚಾಗಿದೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ. ಲೇಬರ್ ಸ್ಟ್ರೈಂಗ್ತ್ ಎಷ್ಟು ಕಡಿಮೆಯಾಗಿದೆ ಎನ್ನುವುದಕ್ಕೂ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ತಮ್ಮ ಉತ್ತರದಲ್ಲಿ ಹನ್ನೊಂದು ಕಾರ್ಖಾನೆಗಳಲ್ಲಿ ನಷ್ಟವಾಗುತ್ತಿದೆ ಎಂದು ಹೇಳಿದ್ದೀರಿ, ಈ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದಾಗಿನಿಂದ ಇಲ್ಲಿಯ ವರೆಗೆ ನಷ್ಟದಲ್ಲಿ ನಡೆಯುತ್ತಿವೆಯೇ ಅಥವಾ ಕೆಲವು ವರ್ಷಗಳಲ್ಲಿ ಲಾಭ ಬಂದಿತ್ತೋ, ನಷ್ಟ ಯಾವಾಗಿನಿಂದ ಪ್ರಾರಂಭವಾಗಿದೆ, ಈ ನಷ್ಟ ಏರುತ್ತಿದೆಯೋ ಅಥವಾ ಇಳಿಯುತ್ತಿದೆಯೋ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದೊಂದು ಪ್ರಶ್ನೆಯನ್ನು ಕೇಳಬೇಕು.

ಶ್ರೀ ಕೆ. ಎಚ್. ಪಾಟೀಲ.—ಹಿಂದೆ ಕೆಲವು ವರ್ಷಗಳಲ್ಲಿ ಲಾಭ ಆಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅಧ್ಯಕ್ಷರೇ, ತಾವು ೨–೩ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ರೂಲ್ಸ್ ನೋಡಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ತಮ್ಮಲ್ಲಿ ಪ್ರಾರ್ಥನೆ ಏನೆಂದರೆ, ಮಾನ್ಯ ಸಚಿವರಿಗೆ ಒಂದು ಪ್ರಶ್ನೆಗೆ ಮಾತ್ರ ಉತ್ತರ ಕೊಡಿ ಎಂದು ತಾವು ಅಪ್ಪಣೆ ಕೊಡಿಸಿದರೆ ಹೇಗೆ ?

ಅಧ್ಯಕ್ಷರು.—ಒಂದು ಗಂಟೆ ಅವಧಿಯಲ್ಲಿ ೧೫ ಪ್ರಶ್ನೆಗಳನ್ನು ಮುಗಿಸಬೇಕಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ನಾನು ಕೇಳಿರುವ ಪ್ರಶ್ನೆಗಳು ಒಂದಕ್ಕೊಂದಕ್ಕೆ ಸಂಪೂರ್ಣ ಸಂಬಂಧ ಆಗಿವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ತಾವು (ಸಿ)ಗೆ ಉತ್ತರ ಕೊಡುತ್ತಾ ೧೧ ಫ್ಯಾಕ್ಟರಿಗಳಲ್ಲಿ ನಷ್ಟ ಆಗಿದೆ ಎಂದು ಹೇಳಿದ್ದೀರಿ ಮತ್ತು (ಡಿ)ಗೆ ಉತ್ತರ ಕೊಡುತ್ತಾ ನಷ್ಟವನ್ನು ಸರಿಪಡಿಸುವುದಕ್ಕೋಸ್ಕರ ಸೆಂಟ್ರಲ್ ಸಿಲ್ಕ್ ಬೋರ್ಡ್‌ನವರು ಒಂದು ಸಬ್ ಕಮಿಟಿಯನ್ನು ನೇಮಕ ಮಾಡಿದ್ದಾರೆ ಎಂದು ತಿಳಿಸಿದ್ದೀರಿ, ಆ ಕಮಿಟಿಯಲ್ಲಿ ಯಾರು ಯಾರು ಇದ್ದಾರೆ, ಯಾವಾಗಿನಿಂದ ಆ ಕಮಿಟಿ ಕೆಲಸ ಮಾಡುತ್ತಿದೆ ?

ಅಧ್ಯಕ್ಷರು.—ಇದಕ್ಕೆ ತಾವು ಬೇರೆ ಪ್ರಶ್ನೆ ಕೇಳಿದರೆ, ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ತಾವು ಸರ್ಕಾರ ನಡೆಸತಕ್ಕ ಹನ್ನೊಂದು ಕಾರ್ಖಾನೆಗಳಲ್ಲಿ ಮಾತ್ರ ನಷ್ಟವಾಗಿದೆ ಎಂದು ತಿಳಿಸಿದ್ದೀರಿ, ಭದ್ರಾವತಿ

ಐರ್ನ ಮತ್ತು ಸ್ಟೀಲ್ ಕಾರ್ಖಾನೆಯ ಬಗ್ಗೆ ಒಂದು ಮಾತನ್ನು ಹೇಳಿಲ್ಲ, ಅದಕ್ಕೆ ಏನು ಕಾರಣ ?

ಶ್ರೀ ಕೆ. ಎಚ್. ಪಾಟೀಲ.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಯಲ್ಲಿ ಇದು ಬರುವುದಿಲ್ಲ. ಹಾನಿಯಾದಂಥ ಫ್ಯಾಕ್ಟರಿಗಳನ್ನು ಮಾತ್ರ ಕೇಳಿದ್ದಾರೆ. ಆದ್ದರಿಂದ ಇದು ಅದರೊಳಗೆ ಬರುವುದಿಲ್ಲ.

ಶ್ರೀ ಟಿ. ಎಂ. ಮಂಜುನಾಥ.—ಸರ್ಕಾರ ನಡೆಸತಕ್ಕ ೬ ರೇಷ್ಮೆ ಕೈಗಾರಿಕೆಗಳ ಮುಖ್ಯ ಕೆಲಸ ಏನು ? ಇವುಗಳಿಂದ ತಯಾರಾಗತಕ್ಕ ವಸ್ತುಗಳನ್ನು ಯಾರಿಗೆ ರವಾನೆ ಮಾಡುತ್ತಾರೆ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಒಂದು ಪ್ರಶ್ನೆಯನ್ನು ಕೇಳಬೇಕು.

ಶ್ರೀ ಟಿ. ಎಂ. ಮಂಜುನಾಥ.—ತಾವು ಮತ್ತೊಂದುಸಲ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದೇ ಕಷ್ಟ.

ಶ್ರೀ ಕೆ. ಎಚ್. ಪಾಟೀಲ—ಕಕೂನ್‌ಗಳನ್ನು ಜನರಿಂದ ಪಡೆದು, ಸಿಲ್ಕ್ ಉತ್ಪತ್ತಿ ಮಾಡಿದ ನಂತರ, ಎಂಪೋರಿಯಂಗಳ ಮುಖಾಂತರ ಮಾರುಕಟ್ಟೆಯಲ್ಲಿ ಮಾರುವಂಥ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಕೆ. ಶ್ರೀರಾಮುಲು.—ಸರ್ಕಾರಿ ಕಾರ್ಖಾನೆಗಳಲ್ಲಿ, ಹೆಚ್ಚಿಗೆ ಲಾಭ ಬಾರದೆ ಲುಕ್ಸಾನು ಆಗುವುದಕ್ಕೆ ನಿಜವಾದ ಕಾರಣ ಏನು ಇರಬಹುದು ಎಂದು ಅಧಿಕಾರಿಗಳು ಕಂಡುಹಿಡಿಯದೆ, ಒಬ್ಬ ಚೇರ್ಮನ್ ಹೋದ ಮೇಲೆ ಇನ್ನೊಬ್ಬರು ಬಂದಾಗ ೧೦—೨೦ ಜನ ಅಧಿಕಾರಿಗಳನ್ನು ಸೇರಿಸಿಕೊಳ್ಳುವುದರಿಂದ ಆಡ್ಮಿನಿಸ್ಟ್ರೇಷನ್‌ನಲ್ಲಿ ಖರ್ಚು ಹೆಚ್ಚಾಗಿ ಉತ್ಪತ್ತಿ ಕಡಿಮೆಯಾಗಿರುವುದರಿಂದ ಈ ರೀತಿಯ ಲುಕ್ಸಾನಿಗೆ ಕಾರಣವಲ್ಲವೆ ?

ಶ್ರೀ ಕೆ. ಎಚ್. ಪಾಟೀಲ.—ಕೆಲವು ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿದಂತಹ ಅಭಿಪ್ರಾಯವೂ ಒಂದು ಕಾರಣ.

ಶ್ರೀ ಟಿ. ಎಂ. ಮಂಜುನಾಥ.—ಈಗ ರೇಷ್ಮೆ ಧಾರಣೆ ದಿನೇ ದಿನೇ ಹೆಚ್ಚು ಆಗುತ್ತಿದೆ, ಆದರೂ ಸಹಿತ ಸರ್ಕಾರಕ್ಕೆ ಸಂಬಂಧಪಟ್ಟಂಥ ಆರು ಕಾರ್ಖಾನೆಗಳು ನಷ್ಟದಲ್ಲಿ ಕೆಲಸ ಮಾಡತಕ್ಕದ್ದು ಮಹತ್ವದ ವಿಷಯ. ಇಲ್ಲಿ ತಯಾರಾದಂಥ ವಸ್ತುಗಳನ್ನು ಯಾರಿಗೆ ರವಾನೆ ಮಾಡುತ್ತೀರಿ ? ಎಷ್ಟು ನಷ್ಟವಾಗಿದೆ ಎಂದು ಅಂಕಿ ಅಂಶಗಳನ್ನು ಕೊಡಬೇಕು ?

ಶ್ರೀ ಕೆ. ಎಚ್. ಪಾಟೀಲ.—ಇಲ್ಲಿ ತಯಾರಾದಂಥ ವಸ್ತುಗಳನ್ನು ಕೋ—ಆಪರೇಟೀವ್ಸ್‌ಗಳಿಗೂ, ಎಂಪೋರಿಯಂಗಳಿಗೂ ಮತ್ತು ಪರರಾಷ್ಟ್ರಕ್ಕೂ ಖಾಸಗಿ ಜವರಿಗೂ ಕಳುಹಿಸುತ್ತೇವೆ.